ಕುಮುದ್ವತಿ ನದಿಗೆ ಅಡ್ಡಲಾಗಿ ಸೇತುವೆ

(೫೦೭) ೨೨೧ ಶ್ರೀ ಬಿ. ಎಸ್. ಯಡಿಯೂರಪ್ಪ, (ಶಿಕಾರಿಪುರ) ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ) ಶಿಕಾರಿಪುರ ತಾಲ್ಲೂಕು ಸುರಗೆಹಳ್ಳಿ ಹತ್ತಿರ ಕುಮುದ್ವತಿ ನದಿಗೆ ಕಟ್ಟಬೇಕೆಂದಿರುವ ಸೇತುವೆಯ ಬಗ್ಗೆ ಬಜೆಟ್‌ನಲ್ಲಿ ಹಣವನ್ನು ಯಾವಾಗ ಮಂಜೂರ್ಮಾಡಲಾಗಿದೆ ?

ಆ) ಈ ವರ್ಷ ಈ ಕೆಲಸ ಪ್ರಾರಂಭಿಸಲಾಗುವುದೇ?

ಇ) ಜಿಲ್ಲಾ ಪರಿಷತ್‌ನವರು ೧೯೮೮-೮೯ನೇ ಸಾಲಿನಲ್ಲಿ ಈ ಕೆಲಸ ಪ್ರಾರಂಭಿಸದಿರಲು ಕಾರಣವೇನು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು). ..

ಅ) ೧೯೮೮-೮೯ರ ಆಯವ್ಯಯದಲ್ಲಿ ರಾಜ್ಯವಲಯದ ಯೋಜನೆಗಳ ಪಟ್ಟಿಯಲ್ಲಿ ರೂ. ೧೫.೦೦ ಲಕ್ಷ ಅಂದಾಜು ಮೊತ್ತದೊಂದಿಗೆ ಸೇರಿಸಲಾಗಿತ್ತು. ಈ ಕಾಮಗಾರಿಯು ರಾಜ್ಯ ವಲಯದ ಕಾಮಗಾರಿಗಳ ಪಟ್ಟಿಯಿಂದ ದಿನಾಂಕ ೧೯-೭-೮೮ ರಂದು ಜಿಲ್ಲಾ ಪರಿಷತ್‌ಗೆ ವರ್ಗಾಯಿಸಲಾಗಿದೆ. ೧೯೮೮-೮೯ರ ಆನುಬಂಧ 'ಇ'ನಲ್ಲಿ ರೂ. ೧೫-೦೦ ಲಕ್ಷ ಅಂದಾಜು ಮೊತ್ತ ಅನುದಾನದೊಂದಿಗೆ ಸೇರಿರುತ್ತದೆ.

ಆ) ಇಲ್ಲ.

ಇ) ಸರ್ಕಾರಿ ಆದೇಶ ಸಂಖ್ಯೆ ಪಿಡಬ್ಲ್ಯೂಡಿ ೯೧ ಎ ಆರ್ ಎಂ ೮೮, ದಿನಾಂಕ ೧೯-೭-೮೮ರ ಪ್ರಕಾರ ಜಿಲ್ಲಾ ಪರಿಷತ್‌ಗೆ ವರ್ಗಾವಾಗಿದ್ದುದರಿಂದ ೧೯೮೮-೮೯ರಲ್ಲಿ ಜಿಲ್ಲಾ ಪರಿಷತ್‌ಗೆ ಕೊಟ್ಟಿರುವ ಅನುದಾನದಲ್ಲಿ ಮತ್ತು ಹೊಂದಾಣಿಕೆಯಿಂದ ಹಣದ ಅವಕಾಶ ಮಾಡಿಕೊಳ್ಳಲಾಗಲಿಲ್ಲ. ಕಾಮಗಾರಿಯ ಅಂದಾಜು ತಾಂತ್ರಿಕ ಮಂಜೂರಾತಿಗಾಗಿ ಮುಖ್ಯ ಅಭಿಯಂತರರಿಗೆ ಕಳಿಸಿದ್ದು ತಾಂತ್ರಿಕವಾಗಿ ಅನುಮೋದನೆ ಪಡೆದಿರುವುದಿಲ್ಲ. ಆದ್ದರಿಂದ ೧೯೮೮-೮೯ರಲ್ಲಿ ಕಾಮಗಾರಿ ಕೈಗೊಳ್ಳಲು ಆಗಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ೧೯೮೮-೮೯ನೇ ಸಾಲಿನ ಆಯವ್ಯಯದಲ್ಲಿ ಸೇರಿದ್ದ ಯಾವುದೇ ಕೆಲಸ ನನ್ನ ತಾಲ್ಲೂಕಿನಲ್ಲಿ ಪ್ರಾರಂಭ ಮಾಡಿಲ್ಲ. ಮಾನ್ಯ ಮಂತ್ರಿಗಳ ಇಲಾಖೆಗೆ ಸಂಬಂಧಪಟ್ಟಂತೆ ಇರುವಂತಹ ಪ್ರಶ್ನೆ ಇದು. ಇದು ಶಿಕಾರಿಪುರ ತಾಲ್ಲೂಕು ಸುರಗೆಹಳ್ಳಿ ಹತ್ತಿರ ಕುಮುದ್ವತಿ ನದಿಗೆ ಅಡ್ಡಲಾಗಿ ಕಟ್ಟಬೇಕಾಗಿರುವ ಸೇತುವೆ. ಇದು ೧೯೮೮-೮೯ನೇ ಸಾಲಿನ ಆಯವ್ಯಯದಲ್ಲಿ ಸೇರಿದ್ದು ಎಂದು ಹೇಳಿದ್ದರೂ ಸಹ ೧೯೮೭-೮೮ನೇ ಸಾಲಿನ ಆಯವ್ಯಯದಲ್ಲೇ ಇದು ಸೇರಿದೆ. ಇದು ೧೫-೨೦ ಹಳ್ಳಿಗಳಿಗೆ ಸಂಪರ್ಕವನ್ನು ಕಲ್ಪಿಸತಕ್ಕ ಸೇತುವೆಯಾಗಿದೆ. ಇದನ್ನು ಕಟ್ಟಿದ್ದರೆ. ಆ ಭಾಗದ ಜನರಿಗೆ ತುಂಬಾ ತೊಂದರೆಯಾಗುತ್ತದೆ. ಇದನ್ನು ಕಳೆದ ೩ ವರ್ಷಗಳಿಂದಲೂ ಕೇಳುತ್ತಿದ್ದೇನೆ. ಈಗಲಾದರೂ ಅದಕ್ಕೆ ಆಗಬೇಕಾಗಿರುವಂತಹ ತಾಂತ್ರಿಕ ಮಂಜೂರಾತಿಯನ್ನು ಕೊಡಿಸಿಕೊಟ್ಟು ಉಳಿದಿರುವ ೨-೩ ತಿಂಗಳಲ್ಲಿ ಅದನ್ನು ಪ್ರಾರಂಭ ಮಾಡುತ್ತೀರಾ ಎಂಬುದಾಗಿ ನೇರವಾಗಿ ಮಂತ್ರಿಗಳನ್ನು ಕೇಳುತ್ತೇನೆ ?

ಶ್ರೀ ಎಂ. ಪಿ. ಪ್ರಕಾಶ್.—ಈಗಾಗಲೇ ಹೇಳಿದಂತೆ ಇದು ೧೯೮೮-೮೯ನೇ ಸಾಲಿನ ಆಯವ್ಯಯದಲ್ಲಿ ರಾಜ್ಯ ವಲಯದ ಯೋಜನೆಯಲ್ಲಿ ಸೇರಿತ್ತು. ಆದರೆ ಹಣವನ್ನು ಮತ್ತು ಹೊಂದಾಣಿಕೆ ಮಾಡಿಕೊಳ್ಳಲಾಗಲಿಲ್ಲ. ಮತ್ತೆ ಮಾನ್ಯ ಸದಸ್ಯರು ಹೇಳಿದ ಹಾಗೆ ಇನ್ನು ೩ದಿವಸಗಳಲ್ಲಿ ಈ ಸಾಲಿನ ಹಣ ಕಾಸಿನ ವರ್ಷ ಮುಕ್ತಾಯವಾಗುತ್ತದೆ. ಹಾಗೆಯೇ ಇದನ್ನು ೧೯೮೯-೯೦ನೇ ಸಾಲಿನಲ್ಲಿ ಸೇರಿಸಿದ್ದೇವೆ. ಖಂಡಿತವಾಗಿ ಮಾಡಿಕೊಡುತ್ತೇವೆ ಎನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನ ಈಗ ಪ್ರಶ್ನೆಗೆ ಉತ್ತರವಾಗಿ ಕಾಮಗಾರಿಯ ಅಂದಾಜು ತಾಂತ್ರಿಕ ಮಂಜೂರಾತಿಗಾಗಿ ಮುಖ್ಯ ಅಭಿಯಂತರರಿಗೆ ಕಳುಹಿಸಿದ್ದು ಆದರಿಂದ ತಾಂತ್ರಿಕ ಮಂಜೂರಾತಿ ಪಡೆದಿರುವುದಿಲ್ಲವೆಂದು ಹೇಳಿದ್ದಾರೆ. ಅಲ್ಲಿರುವ ಇಲಾಖೆಯವರು ತಾಂತ್ರಿಕ

ಮಂಜೂರಾತಿಗಾಗಿ ಕಳುಹಿಸಿಕೊಡದೆ. ಇರುವುದಕ್ಕೆ ಕಾರಣವೇನು ? ಸಾಮಾನ್ಯವಾಗಿ ಬಜೆಟ್‌ನಲ್ಲಿ ಸೇರಿಸುವಂತಹ ಕಾಮಗಾರಿಗಳ ಬಗ್ಗೆ ಸಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ತೀರ್ಮಾನ ಕೈಗೊಳ್ಳುವಂತಹದ್ದು. ಹೋದ ವರ್ಷ ಏಕೆ ತಾಂತ್ರಿಕ ಮಂಜೂರಾತಿಯನ್ನು ಪಡೆದುಕೊಳ್ಳಲಿಲ್ಲ. ಆವರು ಕಳುಹಿಸಿಕೊಟ್ಟಿದ್ದರೆ ಆದರ ಮಂಜೂರಾತಿ ಸಿಕ್ಕುತ್ತಿತ್ತು. ಆಯವ್ಯಯದಲ್ಲೂ ಸೇರುತ್ತಿತ್ತು. ಈಗಲಾದರೂ ಆದನ್ನು ಬೇಗಕಳುಹಿಸಿಕೊಟ್ಟು ಬೇಗನೆ ಕೆಲಸ ಶುರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಪ್ರಾಯಶಃ ಚೀಫ್ ಇಂಜಿನೀಯರ್‌ರವರಿಂದ ತಾಂತ್ರಿಕ ಮಂಜೂರಾತಿ ದೊರೆತಿರುವುದಿಲ್ಲ ಅಂತ ಏಕೆ ತಿಳಿಸಲಾಗಿದೆ ಎಂದರೆ, ೧೯೮೮-೮೯ನೇ ಸಾಲಿನಲ್ಲೇ ಈ ಕೆಲಸವನ್ನು ಮಂಜೂರು ಮಾಡದೇ ಇರುವುದಕ್ಕೆ ಕಾರಣವೇನು ? ಅಂತ ಕೇಳಿದ್ದಕ್ಕೆ ಆ ರೀತಿ ಹೇಳಿದ್ದೇವೆ. ಮಾರುಹೊಂದಾಣಿಕೆಗೆ ಅನುಕೂಲವಾಗಲಿಲ್ಲ. ಆದರಿಂದಾಗಿ ೧೯೮೮-೮೯ ಸಾಲಿನಲ್ಲಿ ಆದನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ. ೧೯೮೯-೯೦ನೇ ಸಾಲಿನ ಆಯವ್ಯಯ ಅನುಬಂಧದಲ್ಲಿ ಇದನ್ನು ಸೇರಿಸಲಾಗಿದೆ. ಬರುವ ವರ್ಷ ಕ್ರಮ ಕೈಗೊಳ್ಳಲಾಗುವುದು. ತಾಂತ್ರಿಕ ಮಂಜೂರಾತಿಯನ್ನೂ ಮುಖ್ಯ ಇಂಜಿನೀಯರ್‌ರವರಿಂದ ಪಡೆಯುತ್ತೇವೆ. ಆ ಕೆಲಸವನ್ನು ಮುಂದಿನ ಸಾರಿ ಪ್ರಾರಂಭಿಸಲಾಗುವುದು.

ಬಂಟ್ವಾಳ ಪುರಸಭೆಗೆ ಕುಡಿಯುವ ನೀರಿನ ಸರಬರಾಜು

(೭೭೦) ಶ್ರೀ ರಮಾನಾಥರೈ (ಬಂಟವಾಳ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಬಂಟ್ವಾಳ ಪುರಸಭೆಯ ಜನಸಂಖ್ಯೆ ಎಷ್ಟು ? ಹಾಗೂ ಆದರ ವಿಸ್ತೀರ್ಣ ಎಷ್ಟು ?

ಆ) ಪುರಸಭೆಯವರು ಇದುವರೆಗೆ ಕುಡಿಯುವ ನೀರಿನ ಪೂರೈಕೆಯಲ್ಲಿ ಸಾಧಿಸಲಾದ ಪ್ರಗತಿ ಎಷ್ಟು ?

ಇ) ಕುಡಿಯುವ ನೀರಿನ ಕೊರತೆಯಿಂದಾಗಿ ಜನರು ಬವಣೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳುವುದೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ೧೯೮೧ನೇ ಸಾಲಿನ ಜನಗಣತಿಯ ಪ್ರಕಾರ ೩೧,೩೭೮. ಈ ಪುರಸಭೆಯ ಒಟ್ಟು ವಿಸ್ತೀರ್ಣ ೬೩೫೮ ಎಕರೆ ಅಥವಾ ೨೫೫.೭೩ ಚದರ ಕಿಲೋ ಮೀಟರ್‌ಗಳು.

ಆ) ಬಂಟ್ವಾಳ ಪಟ್ಟಣಕ್ಕೆ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯ ಅಡಿಯಲ್ಲಿ ನೀರು ಸರಬರಾಜು ಯೋಜನೆಯನ್ನು ನೇತ್ರಾವತಿ ನದಿಯನ್ನು ಮೂಲವಾಗಿಟ್ಟುಕೊಂಡು ೧೯೭೩ರಲ್ಲಿ ಪ್ರಾರಂಭಿಸಿ ೧೧-೬೫ರಲ್ಲಿ ಮುಗಿಸಿ ನೀರನ್ನು ಕೊಡಲಾಗುತ್ತಿದೆ. ಇದಲ್ಲದೆ ಈ ಪಟ್ಟಣದಲ್ಲಿ ಇದುವರೆಗೂ ೩೦ ಕೊಳವೆ ಬಾವಿಗಳನ್ನು ತೋಡಲಾಗಿದೆ, ಹಾಲಿ ಬಂಟ್ವಾಳ ಪುರಸಭೆಯವರು ತಲಾ ದಿನಂ ಪ್ರತಿ ೪೦ ಲೀಟರ್ ನೀರನ್ನು ಸಾರ್ವಜನಿಕರಿಗೆ ಸರಬರಾಜು ಮಾಡುತ್ತಿದ್ದಾರೆ.

ಇ) ಬಂದಿದೆ.

ಈ) ಈ ಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ರೂ. ೮೮.೫೦ಲಕ್ಷಗಳಿಗೆ ಒಂದು ಯೋಜನೆ ಅಂದಾಜನ್ನು ತಯಾರಿಸಲಾಗಿದೆ.

ಶ್ರೀ ರಾಮನಾಥ ರೈ —ಮಾನ್ಯ ಅಧ್ಯಕ್ಷರೇ, ಬಂಟ್ವಾಳ ಪುರಸಭೆ ಒಂದು ವಿಶಿಷ್ಟವಾದ ಪುರಸಭೆ ಎರಡು ವಿಧಾನ ಸಭೆ ಕ್ಷೇತ್ರ ಹಾಗೂ ಎರಡು ಲೋಕಸಭೆ ಕ್ಷೇತ್ರಗಳು ಮೂರು ಪಂಚಾಯಿತಿಗಳನ್ನು ಸೇರಿ ಪುರಸಭೆಯನ್ನು ರಚನೆ ಮಾಡಿಕೊಂಡಿದ್ದಾರೆ. ಶೇಕಡ ೭೦ ಭಾಗ ಗ್ರಾಮೀಣ ಪ್ರದೇಶಗಳು ಸೇರಿಕೊಂಡು ಈ ಒಂದು ಪುರಸಭೆಯ ರಚನೆ ಆಗಿದೆ. ಶೇಕಡ ೨೦ ಭಾಗ ಜನರಿಗೆ ಮಾತ್ರ ರಾಷ್ಟ್ರೀಯ